

# ಸೈಂಟ್ ಪೀಟರ್ಸ್ ಬೆಸಿಲಿಕ



■ ಎಂ.ಎಸ್. ರಘುನಾಥ್

ಯೂರೋಪ್ ಪ್ರವಾಸದ ಅಂಗವಾಗಿ ರೋಮ್ ಮತ್ತು ವ್ಯಾಟಿಕನ್ ಸಿಟಿಗೆ ಭೇಟಿ ಕೊಟ್ಟದ್ದು ಸೌಭಾಗ್ಯವೆಂದೇ ಅನ್ನಿಸಿತು. ಅದೊಂದು ಭವ್ಯ ಧಾರ್ಮಿಕ ಕ್ಷೇತ್ರ.

ಜಗತ್ತಿನ ಅತಿ ಚಿಕ್ಕ ಸ್ವತಂತ್ರ ರಾಷ್ಟ್ರ ರೋಮ್‌ನಲ್ಲೇ ಇರುವ ವ್ಯಾಟಿಕನ್. ಕೇವಲ ನೂರು ಎಕರೆಯ ವಿಸ್ತೀರ್ಣದ ಇದಕ್ಕೆ ಸ್ವತಂತ್ರ ರಾಷ್ಟ್ರದ ಮಾನ್ಯತೆ ದೊರಕಿದೆ. ಅದರ ಮಧ್ಯದಲ್ಲಿ ಇರುವುದೇ ಸೈಂಟ್ ಪೀಟರ್ಸ್ ಸ್ಕ್ವೇರ್‌ನ ಸೈಂಟ್ ಪೀಟರ್ಸ್ ಬೆಸಿಲಿಕ. ಇದು ಕ್ರೈಸ್ತ ಪ್ರಪಂಚದ ಅತಿ ದೊಡ್ಡ ಚರ್ಚ್.

ಕ್ರಿ.ಶ. 64ರಲ್ಲಿ ಶಿಲುಬೆಗೇರಿಸಲ್ಪಟ್ಟ, ಯೇಸುಕ್ರಿಸ್ತನ ಪರಮ ಶಿಷ್ಯರಲ್ಲಿ ಒಬ್ಬನಾದ ಪೀಟರನ ಅಳಿದುಳಿದ ಭಾಗಗಳನ್ನು ತಂದು ಇಲ್ಲಿ ಸಮಾಧಿ ಮಾಡಲಾಗಿದೆ. ಈ ಚರ್ಚ್‌ನ ನಿರ್ಮಾಣಕಾರ್ಯ 1506ರ ಏಪ್ರಿಲ್ 18ರಂದು ಆರಂಭವಾಗಿ 1626ರ ನವೆಂಬರ್ 18ರಂದು ಮುಗಿಯಿತಂತೆ.

ಚರ್ಚಿನ ಮಧ್ಯದಲ್ಲಿ ಮೇಲ್ಭಾಗದಲ್ಲಿರುವ ಬೃಹತ್ ಗೋಪುರ ರೋಮ್‌ನ ಬಾನ ರೇಖೆಯನ್ನು ಆಕ್ರಮಿಸಿದೆಯೆಂದೇ ಹೇಳಬಹುದು. ಜಗದ್ವಿಖ್ಯಾತ ಚಿತ್ರ ಕಲಾವಿದ ಮೈಕೆಲ್ ಏಂಜಲೊ ವಿನ್ಯಾಸಗೊಳಿಸಿದ ಈ ಗೋಪುರ ಸುಮಾರು 450 ಅಡಿ ಎತ್ತರವಿದ್ದು, ಜಗತ್ತಿನಲ್ಲೇ ಅತ್ಯಂತ ದೊಡ್ಡ ಗೋಪುರವೆಂದು ವರ್ಣಿಸಲಾಗಿದೆ. (ಎರಡನೆಯದು ನಮ್ಮ ವಿಜಾಪುರದ ಗೋಲ್ ಗುಂಬಜ್‌ನ ಗೋಪುರ ಎನ್ನಲಾಗುತ್ತಿದೆ.) ಇದರ ವ್ಯಾಸ ಸುಮಾರು 136 ಅಡಿ.

16ನೆ ಶತಮಾನದಲ್ಲಿ ಮೈಕೆಲ್ ಏಂಜಲೋನ ಸಹಯೋಗದಲ್ಲಿ ರೂಪಿಸಲ್ಪಟ್ಟದ್ದಕ್ಕಾಗಿ ಹಾಗೂ ಇತರ ಚಾರಿತ್ರಿಕ ಕಾರಣಗಳಿಗಾಗಿ ಈ ಚರ್ಚ್ ವಿಶ್ವವಿಖ್ಯಾತವಾಗಿದೆ. ಕ್ರೈಸ್ತ ಬಾಂಧವರಿಗಂತೂ  ಪರಮ ಪವಿತ್ರ ಸ್ಥಳ. ಕ್ರೈಸ್ತ ಜಗದ್ಗುರು ಪೋಪ್‌ರವರ ವಾಸಸ್ಥಾನವೂ ಇದೇ. ಕೆಲವು ವಿಶೇಷ ಸಂದರ್ಭಗಳಲ್ಲಿ ಹಾಗೂ ಕ್ರಿಸ್ಮಸ್ ಸಂದರ್ಭದಲ್ಲಿ ಪೋಪ್‌ರವರು ಇಲ್ಲಿಂದಲೇ ವಿಶ್ವದ ಕ್ರೈಸ್ತ ಬಾಂಧವರಿಗೆ ಸಂದೇಶಗಳನ್ನು ನೀಡುತ್ತಾರೆ.

ಗೋಪುರದವರೆಗೂ ಹೋಗಲು ಪ್ರವಾಸಿಗರಿಗೆ ಅವಕಾಶವಿದೆ. ಅಲ್ಲಿಂದ ನಾವು ಇಡೀ ಪೀಟರ್ಸ್ ಸ್ಕ್ವೇರ್ ಹಾಗೂ ರೋಮ್‌ನ ಅತ್ಯಾಕರ್ಷಕ ನೋಟವನ್ನು ಆಸ್ವಾದಿಸಿದೆವು.

ನವೋದಯ ಶೈಲಿಯ ವಾಸ್ತುಶಿಲ್ಪದ ಈ ಚರ್ಚ್‌ಅನ್ನು ಕಂಚು ಲೋಹದ ದ್ವಾರದಿಂದ ಪ್ರವೇಶಿಸಿದೆವು. ಒಳಗೆ ವಿಖ್ಯಾತ ಕಲಾವಿದರಿಂದ ವಿನ್ಯಾಸಗೊಳಿಸಲ್ಪಟ್ಟ ನಲವತ್ತೈದು ನಿವೇದನ ಪೀಠಗಳಿವೆ. ಹಿಂದಿನ ಪೋಪ್‌ಗಳು ಹಾಗೂ ಇತರ ಗಣ್ಯರ ಸಮಾಧಿಯೂ ಇಲ್ಲಿದೆ. ಮೈಕೆಲ್ ಏಂಜೆಲೊ ಹಾಗೂ ಇತರ ಕಲಾವಿದರ ಚಿತ್ರಕಲೆಯನ್ನೂ ಗೋಡೆಗಳ ಮೇಲೆ ಕಾಣಬಹುದು. ಚರ್ಚ್‌ನ ಒಳಭಾಗದಲ್ಲಿ ಕತ್ತೆತ್ತಿ ನೋಡಿದರೆ, ಏಸುಕ್ರಿಸ್ತನ ಅನೇಕ ಅನುಯಾಯಿಗಳ ಹಾಗೂ ಬೈಬಲ್ಲಿನ ಕಥೆಗಳಿಗೆ ಸಂಬಂಧಿಸಿದ ವರ್ಣಚಿತ್ರಗಳಿವೆ.

ಈ ಚರ್ಚ್‌ನ ಮತ್ತೊಂದು ಆಕರ್ಷಣೆ ಎಂದರೆ, ಸೈಂಟ್ ಪೀಟರ್ಸ್ ಚೌಕದ ಮಧ್ಯೆ ಇರುವ, (ಚೌಕಾಕಾರದ ತುದಿಗೆ ಹೋಗುತ್ತಾ ಕೊನೆಯಾಗುವ) ಪಿರಮಿಡ್ ಆಕೃತಿಯ ಸ್ಮಾರಕ ಕಂಬ ಹಾಗೂ ಎರಡೂ ಪಾರ್ಶ್ವಗಳಲ್ಲಿ ಇರುವ ಗುಂಪು ಸ್ತಂಭಗಳು. ಪಿರಮಿಡ್ ಆಕೃತಿಯ ಕಂಬವು 25 ಮೀಟರ್ ಎತ್ತರದಲ್ಲಿದ್ದು, ಇದನ್ನು 1585 ರಲ್ಲಿ ಸ್ಥಾಪಿಸಲಾಗಿದೆ. ಇದನ್ನು ಈಜಿಪ್ಟ್‌ನಿಂದ ರೋಮ್‌ಗೆ ತರಲಾಯಿತಂತೆ. ಅಕ್ಕ ಪಕ್ಕದ ಕಾರಂಜಿಗಳೂ ಗಮನ ಸೆಳೆಯುತ್ತವೆ.

ಪ್ರತಿ ಪಾರ್ಶ್ವದಲ್ಲೂ ಇರುವ 142 ಸ್ತಂಭಗಳನ್ನು ಹೇಗೆ ಸ್ಥಾಪಿಸಲಾಗಿದೆಯೆಂದರೆ, ಮೊದಲನೆಯ ಸ್ತಂಭದ ಎದುರು ನಿಂತರೆ, ನಮಗೆ ಕಾಣುವುದು ಒಂದೇ ಒಂದು ಸ್ತಂಭ ಮಾತ್ರ! ಎರಡೂ ಪಾರ್ಶ್ವಗಳಲ್ಲಿ ಹೊರಗೆ ನಿರ್ಮಿಸಿರುವ ಈ ಸ್ತಂಭಗಳು ಕ್ರೈಸ್ತ ಧರ್ಮ ಜಗತ್ತಿನಾದ್ಯಂತ ಚಾಚಿರುವುದರ ಸಂಕೇತ ಎನ್ನಲಾಗುತ್ತಿದೆ. ಸ್ತಂಭಗಳನ್ನು ಎಣಿಸುತ್ತಾ ಈ ಚೌಕದಲ್ಲಿ ವಿಹರಿಸಿದ್ದು ಒಂದು ಆಹ್ಲಾದಕರ ಅನುಭವ. ಕಾಲಿಗೆ ಸಾಕಷ್ಟು ಕಸರತ್ತು ನೀಡಿದರೂ, ಅದರ ಭವ್ಯತೆ ನಮ್ಮ ಕಣ್ತಣಿಸಿತು.

ಸದಾ ಪ್ರವಾಸಿಗರಿಂದ ತುಂಬಿ ತುಳುಕುವ ಈ ಚರ್ಚ್‌ಗೆ ನಾವು ಬೆಳಿಗ್ಗೆಯೇ ಹೋಗಿದ್ದರಿಂದ ಹೆಚ್ಚು ಕಾಲ ಕ್ಯೂನಲ್ಲಿ ನಿಲ್ಲಬೇಕಾಗಲಿಲ್ಲ. ಸಾಕಷ್ಟು ಸುತ್ತಾಡಿದ ಮೇಲೆ ಇಲ್ಲಿನ ಶೌಚಾಲಯಕ್ಕೆ ಹೋದರೆ 'ಪ್ರತಿ ಬಾರಿ ಬಳಕೆಯಾದ ಮೇಲೆ, ಇದು ಸ್ವಯಂಚಾಲಿತವಾಗಿ ಆರೋಗ್ಯಕರ ರೀತಿಯಲ್ಲಿ ಶುಚಿಗೊಳ್ಳುತ್ತದೆ' ಎಂಬ ಫಲಕ ಕಾಣಿಸಿತು. ಅಲ್ಲಿ 'ಶುಚಿತ್ವವು ದೈವತ್ವದ ನಂತರದ್ದು' ಎಂಬರ್ಥ ಹೊಳೆದದ್ದು ಕಾಕತಾಳೀಯವಲ್ಲ!